# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ವಿಶೇಷ ಆಯುಕ್ತರು (ಯೋಜನೆ) ರವರ ಕಛೇರಿ, ಪಾಲಿಕೆಯ ಮುಖ್ಯ ಕಛೇರಿಗಳು, ನರಸಿಂಹರಾಜ ಚೌಕ, ಬೆಂಗಳೂರು-560002.

ಸಂಖ್ಯೆ:ಬಿಬಿಎಂಪಿ/ವಿಆ(ಯೋ)/ಪಿ.ಆರ್/2942 /2022-23 ದಿನಾಂಕ:03/02/2023

-:: ಕಛೇರಿ ಆದೇಶ ::-

**ವಿಷಯ :** ಘನ ಕೇಂದ್ರ ಸರ್ಕಾರ, ಘನ ರಾಜ್ಯ ಸರ್ಕಾರದ ಅನುದಾನಗಳು ಮತ್ತು ಪಾಲಿಕೆಯ ಅನುದಾನಗಳಲ್ಲಿ ಪಾಲಿಕೆ ವತಿಯಿಂದ ಅನುಷ್ಠಾನಗೊಳಿಸುವ ಕಾಮಗಾರಿಗಳ ಪ್ರಗತಿಯ ಕುರಿತು ಡ್ಯಾಸ್‌ಬೋರ್ಡ್ ಸಿದ್ದಪಡಿಸುವ ಕಾರ್ಯಕ್ಕೆ ಪ್ರಧಾನ ಅಭಿಯಂತರರವರ ತಾಂತ್ರಿಕ ಸಹಾಯಕರನ್ನು ನೋಡಲ್ ಅಧಿಕಾರಿಯಾಗಿ ನೇಮಿಸುವ ಕುರಿತು.

*-*-*-*-*-*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಪ್ರದೇಶಗಳ ಅಭಿವೃದ್ಧಿ ಮತ್ತು ನಿರ್ವಹಣೆಗೆ ಘನ ಕೇಂದ್ರ ಸರ್ಕಾರ, ಘನ ರಾಜ್ಯ ಸರ್ಕಾರದ ಅನುದಾನಗಳು ಅಮೃತ ನಗರೋತ್ಥಾನ ಹಾಗೂ ಇನ್ನಿತರೆ ಮತ್ತು ಪಾಲಿಕೆಯ ಅನುದಾನಗಳಿಂದ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿರುತ್ತದೆ, ಈ ಸಂಬಂದ ಸದರಿ ಅನುದಾನಗಳ ವಿವರಗಳನ್ನು ಕೇಂದ್ರಿಕರಿಸಲು ಕಾಮಗಾರಿಗಳ ಮಾಹಿತಿಯನ್ನು ಸಂಬಂಧಪಟ್ಟ ಮುಖ್ಯ ಅಭಿಯಂತರರವರ ಕಛೇರಿಗಳಿಂದ ನಿಗಧಿತ ನಮೂನೆಯಲ್ಲಿ ಪಡೆದು ಕ್ರೂಢೀಕರಿಸಿ, ಪಾಲಿಕೆಯ ಮಾಹಿತಿ ತಂತ್ರಜ್ಞಾನ ವಿಭಾಗದೊಂದಿಗೆ ಸಮನ್ವಯ ಸಾಧಿಸಿ ಮಾಹಿತಿಯನ್ನು ಡ್ಯಾಶ್‌ಬೋರ್ಡ್‌ನಲ್ಲಿ ಅಪ್‌ಲೋಡ್ ಮಾಡುವ ಸಂಬಂಧವಾಗಿ ಪ್ರಧಾನ ಅಭಿಯಂತರರವರ ತಾಂತ್ರಿಕ ಸಹಾಯಕರನ್ನು ನೋಢಲ್ ಅಧಿಕಾರಿಯಾಗಿ ನೇಮಿಸಿದೆ.

ಮಾನ್ಯ ಮುಖ್ಯ ಆಯುಕ್ತರು ರವರು ಪ್ರತಿ ಸೋಮವಾರ ನಿಗಧಿಪಡಿಸಿರುವ ಸಭೆಗೆ ಕ್ರೂಢೀಕರಿಸಿದ ಮಾಹಿತಿಯನ್ನು ಕಡ್ಡಾಯವಾಗಿ ಸಲ್ಲಿಸುವುದು.

3/2/23

ವಿಶೇಷ ಆಯುಕ್ತರು (ಯೋಜನೆ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ರವರಿಗೆ;-
ತಾಂತ್ರಿಕ ಸಹಾಯಕರು
ಪ್ರಧಾನ ಅಭಿಯಂತರರವರ ಕಛೇರಿ
ಬಿಬಿಎಂಪಿ., ಬೆಂಗಳೂರು.

ಪ್ರತಿಯನ್ನು:-

1. ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
2. ವಿಶೇಷ ಆಯುಕ್ತರು (ಮಾಹಿತಿ ತಂತ್ರಜ್ಞಾನ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
3. ವಲಯ ಆಯುಕ್ತರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ಯಲಹಂಕ) ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ.
4. ಪ್ರಧಾನ ಅಭಿಯಂತರರವರ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
5. ಮುಖ್ಯ ಅಭಿಯಂತರರು (ಪೂರ್ವ, ಪಶ್ಚಿಮ, ದಕ್ಷಿಣ, ಬೊಮ್ಮನಹಳ್ಳಿ, ದಾಸರಹಳ್ಳಿ, ಮಹದೇವಪುರ, ರಾಜರಾಜೇಶ್ವರಿನಗರ, ಯಲಹಂಕ, ರಸ್ತೆ ಮೂಲಭೂತ ಸೌಕರ್ಯ, ಯೋಜನೆ-ಕೇಂದ್ರ, ಕೆರೆಗಳು, ಬೃಹತ್ ನೀರಗಾಲುವೆ, ಘನ ತ್ಯಾಜ್ಯ ನಿರ್ವಹಣೆ) ರವರ ಅವಗಾಹನೆಗೆ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
6. ಅಧೀಕ್ಷಕ ಅಭಿಯಂತರರು, ವಿದ್ಯುತ್-1 & 2 ರವರ ಅವಗಾಹನೆಗೆ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
7. ಮಾಹಿತಿ ತಂತ್ರಜ್ಞಾನ ಸಲಹೆಗಾರರವರ ಅವಗಾಹನೆಗೆ ಮತ್ತು ಮುಂದಿನ ಕ್ರಮಕ್ಕಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.

ಉಪ ಮುಖ್ಯ ಮಾಹಿತಿ ಅ...
(ಮಾಹಿತಿ ತಂತ್ರಜ್ಞಾನ) ರವರ ಕ...
ಸಂಖ್ಯೆ: 1286
ದಿನಾಂಕ: 4/2/23
ಬೃಹತ್ ಬೆಂಗಳೂರು ಮಹಾನಗರ ಪಾ...
ಎನ್.ಆರ್.ಚೌಕ, ಬೆಂಗಳೂರು

DC(IO)

FDC
to
04/02/23